## ಮನದ ಭಾಷೆಯ ‘ಚೆನ್ನುಡಿ’

‘ನಾವಾಡುವ ನುಡಿಯೇ ಕನ್ನಡ ನುಡಿ’ ಅಂತ ಅಣ್ಣಾವ್ರು ಹಾಡಿದಾಗಲೆಲ್ಲ, ನಮ್ಮ ಮನೆಯ ನುಡಿ ನಮ್ಮ ಮನಸಿಗೆ ಬರುತ್ತದೆ. ಕನ್ನಡದ ವೈವಿಧ್ಯಮಯ ಧಾಟಿಯ ಮಾತುಗಳಲ್ಲಿ ಕನ್ನಡ ನುಡಿ ಸಿರಿವಂತಿಕೆ ಈ ‘ಚೆನ್ನುಡಿ’ ಸರಣಿಯಲ್ಲಿ ಪ್ರಕಟವಾಗಲಿದೆ. ಕನ್ನಡ ಭಾಷೆಯ ಧ್ವನಿ ಕೇಳಲು **ಪ್ರಜಾವಾಣಿಯ ಕನ್ನಡ ಧ್ವನಿ ಪಾಡ್‌ಕಾಸ್ಟ್** ಕೇಳಿ. ಪ್ರತಿ ಗುರುವಾರ ಬೆಳಗ್ಗೆ 9 ಗಂಟೆಗೆ ಈ ಸರಣಿಯ ಲೇಖನದ ಓದು ನಿಮ್ಮ ಕೇಳ್ವಿಕೆಗೆ ಪ್ರಸಾರವಾಗಲಿದೆ.



ಏಕಾದಶಿಯಂದು ಉಪವಾಸ ಮಾಡಿ ದ್ವಾದಶಿಯ ಪಾರಣೀ ಮಾಡಿ... ಎಲ್ಲರೂ ಹಾಂsಗ ಅಡ್ಡಾಗಿದ್ದರು. ನಮ್ಮ ಮುತ್ತಿನ ಹುಡುಗಿಯೂ ಲಗೂsನ ಎದ್ದು ಅಡಿಗಿ ಮಾಡಿ ಎಲ್ಲರಿಗೂ ಊಟಕ್ಕ ಹಾಕಿ ದಣಿದಿದ್ದಳು. ಕೂತಲ್ಲೇ ತೂಕಡಿಸುತಿದ್ದ ಎಳೀ ಸವತೀಕಾಯಿಯಂತಹ ಹುಡುಗಿ...

...ಸ್ವಲ್ಪs ಹೊತ್ತಿನ್ಯಾಗ ನಡಕೋತ ಹೊಂಟಿದ್ದಳು. ಮುಂದ ಗಂಡ, ಹಿಂದ ಅತ್ತಿ, ಮಾವ. ಗಂಡನ ಮುಂದೆ ಮತ್ತೆ ಬ್ಯಾರೆ ಮಂದಿ. ಅತ್ತಿ ಮಾವನ ಹಿಂದ ಇನ್ನಷ್ಟ ಬ್ಯಾರೇ ಮಂದಿ ಎಲ್ಲರೂ ಕೂಡಿ ಗೋಡಂಬಿ ಸ್ವಾಮಿ ದರ್ಶನಕ್ಕ ಹೊಂಟಿದ್ದರು. ಸಾಲಾಗಿ, ಹೊಲದ ನಡುವೆ ಇರಬಿ ಸಾಲಿನ ಹಂಗ ತಲಿ ಮ್ಯಾಲೆ ಒಂದೊಂದು ಗಂಟ ಹೊತಗೊಂಡು ಬರೇ ಕಾಲಿನ್ಯಾಗ ಹೊಂಟಿದ್ದರು. ನಡ ನಡುವ ಕೆಮಿಕೋತ ಖ್ಯಾಕರಿಸ್ಕೋತ ಅತ್ತಿ, ಹರಳೆಣ್ಣಿ ಕುಡಿದವರಂಗ ಮಾರಿ ಮಾಡಿಕೊಂಡು ಮಾವ, ಸಿಟ್ಟಿಗೆದ್ದು ಬೈಕೋತ ಬರುವ ಗಂಡ ಇವರ ನಡುವೆ ಒಂದ ನಮೂನಿ ನಿರ್ಲಕ್ಷ ಆದರ, ಒಂದ ನಮೂನಿ ಉತ್ಸಾಹದಿಂದ ಹೊಸದೇನೋ ಕಾಣಬಹುದೆಂಬ ಉಮೇದಿನಿಂದ ಈ ನಮ್ಮ ಚೆಲುವಿ ಹೊರಟಿದ್ದಳು.

ಭಾಳ ದಿನಗಳ ಮ್ಯಾಲೆ ಹೊಚ್ಚಲಾ ದಾಟಿದ್ದಳು. ಅಂದ ಹಂಗ ಅಕಿ ಹೆಸರು ಚೆಲುವಿ ಅಂತನs ಇತ್ತು. ತೆಳ್ಳನ ನಾಜೂಕಿನ ಪಾದದಾಗ ಅಕೀ ತೂಕದ ಗೆಜ್ಜಿ ಝುಲ್ ಝುಲ್ ಝುಲ್ ಝುಲ್ ಅಂತ ಶಬ್ದ ಮಾಡಿ ಆಕೆಯ ಅತ್ತಿಗೆ ಕಿರಿಕಿರಿ ಮಾಡಲಿ ಖತ್ತಿತ್ತು. ಹಿಂಗ ನಡಕೋತ ನಡಕೋತ, ನಡುನಡುವ ನಿಂತು ಕೂತು ಬುತ್ತಿ ಬಿಚ್ಚಿ ಕಲಸನ್ನ ಉಣಕೊತ ಮ್ಯಾಲೆ ಸೀನೀರು ಕುಡಕೋತ ಮತ್ತ ನಡಕೋತ ರಣರಣ ಬಿಸಿಲಾಗs ಗೋಡಂಬಿ ಸ್ವಾಮಿ ಊರಿಗೆ ಬಂದರು.

ಎಂಥಾ ಗದ್ದಲ! ಎಷ್ಟು ಮಂದಿ! ಸಾಲಾಗಿ ಹೊರಟಿದ್ದ ಇರಿಬಿಗಳೆಲ್ಲ ಒಟ್ಟಿಗೆ ಈ ಊರಿಗೆ ಮುಕರಿಧಾಂಗ ಭಾಸ ಆಗುತ್ತಿತ್ತು. ಚೆಲುವಿಗೆ ಯಾವುದೋ ಹೊಸ ಲೋಕಕ್ಕ ಬಂದಂಥ ಅನುಭವ! ಮನಿಯ ನಾಲ್ಕ ಗ್ವಾಡಿ ಬಿಟ್ಟು ಬಂದದ್ದು... ಬಿಸಿಲಿನ ಝಳ ತಂಪ ಮಾಡಿತ್ತು. ಅಷ್ಟ ಮಂದಿ ಒಳಗ, ಗದ್ದಲದಾಗ, ನೂಕಿಸಿಕೋತ ನೂಕಿಸಿಕೋತ ಅವರೆಲ್ಲರೂ ಗೋಡಂಬಿ ಸ್ವಾಮಿ ಹತ್ತಿರ ಬಂದುಬಿಟ್ಟಿದ್ದರು. ಗೋಡಂಬಿ ಸ್ವಾಮಿ ಚೆಲುವಿsನ ಕಂಡು ವಾತ್ಸಲ್ಯದಿಂದ ‘ಕುಟುಂಬ ವಡಿಬ್ಯಾಡs ತಂಗಿ, ಎಲ್ಲರನ್ನೂ ಸಂಭಾಳಿಸಿಕೊಂಡು ಹೋಗು, ಸವಳನೀರು ಕುಡಿಬ್ಯಾಡ, ನೀನು ಸೀನಿರಿಗೆ ಹುಟ್ಟಿ. ಆರಾಮ ಇರವಾ ತಂಗಿ’ ಅಂತ ಹೇಳಿ ಆಕಿ ಉಡಿಯಾಗ ಒಂದು ಮುಷ್ಟಿ ಗೋಡಂಬಿ ಒಗದು... ‘ಮುಂದೆ ನಡಿ ವಾ’ ಎಂದು ಅಂದ. ಕೂಡಲೇ ಮಂದಿ ಗುಂಪು ಅಕಿನ್ನ ನೂಕಿ ತಾ ತಾ ಎಂದು ಸ್ವಾಮೀ ಕಡೆಗೆ ಹರಿಯಿತು.

ಗುಂಪಿನಿಂದ ನೂಕಿಸಿಕೊಡು ಚೆಲುವಿ ಹೊರಗ ಬಂದು ನೋಡಿದರ ಅಕಿ ಗಂಡ, ಅತ್ತಿ, ಮಾವ ಎಲ್ಲಾರೂ ಚದರಿ ಚಲ್ಲಾಪಿಲ್ಲಿಯಾಗಿದ್ದರು. ತಾ ಏಕದಂ ಹಿಂಗ ಒಬ್ಬಂಟಿಯಾಗಿ ತನ್ನ ಮಂದಿ ಇಂದ ಕಳಕೊಂಡ ಬಗ್ಗೆ ಚೆಲುವಿಗೆ ಯಾಕೋ ಸ್ವಲ್ಪೂ ಅಂಜಿಕಿಯಾಗಲಿಲ್ಲ. ಯಾಕೋ ಅರಾಮ್ ಅನಿಸಿತು. ಅವರನ್ನೆಲ್ಲಾ ಹುಡುಕ್ಯಾಡೋ ಬದಲಿಗೆ ಒಂದೊಂದs ಗ್ವಾಡಂಬಿ ತಿನ್ಕೋತ ತಿನ್ಕೋತ ಜಾತ್ರಿ ಅಲಕೋತ ಎಲ್ಲವನ್ನೂ ನೋಡಕೋsತ ಜನ ಸಂದಣಿಯಿಂದ ಹೊರಗ ಆ ಊರಿಗೆ ಬಂದು ಬಿಟ್ಟಿದ್ದಳು. ಆ ಊರಿನ್ಯಾಗ ವಾತಾವರಣನ ಒಂದ ನಮೂನಿ ಬ್ಯಾರೆ ಇತ್ತು. ಆಹ್ಲಾದಕರ ಇತ್ತು ಶಾಂತ ಇತ್ತು ಚೇತೋಹಾರಿ ಇತ್ತು. ಆಗಿನು ಚಳಿಗಾಲ ಮುಗದು ಬ್ಯಾಸಿಗಿ ಸುರು ಆಗಿತ್ತು... ವಸಂತ ಮಾಸ ಕಾಲಿಟ್ಟಿತ್ತು. ಇಣಚಿ, ಗುಬ್ಬಿ ಕೋಗಿಲಾ ಸುಮ್ಮನ ತಮ್ಮ ತಮ್ಮ ಪಾಡಿಗೆ ಹರಟಿ ಹೊಡಕೋತ ನಡನಡುವ ಹಾಡಿಕೋತ ಹಾರಾಡಿಕೋತ ಏನೋ ಕೆಲಸಾ ನಡಸಿದ್ದವು. ರಸ್ತೆ ಮ್ಯಾಲಿನ ಕೆಂಪು ಮಣ್ಣಿನ ನುಣ್ಣನೆ ಧೂಳಿನ್ಯಾಗ ಬ್ಯಾಸಿಗಿ ವಾಸನಿ ಘಮ್ ಅಂತ ಮೂಗೀಗೆ ಅಡರತಿತ್ತು. ಬಣ್ಣ ಬಣ್ಣದ ಹೂಗಳ ಮ್ಯಾಲೆ ಕೆಂಪು ಬಣ್ಣದ ಪಾತರಗಿತ್ತಿಗೊಳು ಮಾರೀ ಮಸೀತಿದ್ದವು. ಆದರೆ ರಸ್ತೆದಾಗ ಮಾತ್ರ ಯಾರೂ ಕಾಣಸಿಸತಿದ್ದಿಲ್ಲಾ...

ಎಲ್ಲರೂ ಬಹುತೇಕ ತಮ್ಮ ತಮ್ಮ ಮನ್ಯಾಗ ತಮ್ಮ ತಮ್ಮ ಕೆಲಸದಾಗ ಮಗ್ನ ಆಗಿಬಿಟ್ಟಿದ್ದರು ಅಂತ ಕಾಣಿಸತದ. ಇಂಥಾ ಊರಿನ್ಯಾಗ ನಮ್ಮ ಚೆಲುವಿ ಜಾತ್ರ್ಯಾಗ ನೂರಾರು ಬಳಿ ಖರೀದಿ ಮಾಡಿದಳು... ವಟ್ಟs ಜಿಕೆರಿ ಮಾಡಲಿಲ್ಲ ಆಕೀ ಹತ್ತಿರ ರೊಕ್ಕಾನ ಇಲ್ಲದಿದ್ದರೂ ಬಳೀ ಮಾರೋವಾಕಿ ಇಕಿ ಮಾರಿ ನೋಡೇ ಬಳಿ ಕೊಟ್ಟುಬಿಟ್ಟಳು. ರಗಡ್ ಬ್ಯಾರೆ ಬ್ಯಾರೆ ಟಾಯಿಪಿನ ಬಳಿಗಳನ್ನೆಲ್ಲ ಒಂದು ಸರ ಕಟ್ಟಿ ಕೈಯಾಗ ಹಗೂರಕ ತೂಗ್ಯಾಡಿಸಿಕೋತ ಹೊಂಟಿದ್ದಳು. ಗುಲಾಬಿ ಬಣ್ಣದ ಮ್ಯಾಲೆ ನೀಲಿ ಬಣ್ಣದ ಹೂವಿನ ಚಿಕ್ಕಿ ಇರೋವಂಥ ಬಳಿಗೊಳು, ನೀಲಿ ಬಣ್ಣದ ಮ್ಯಾಲೆ ಬಿಳೆ ಹೂ ಗೋಳು, ತಾಮ್ರದ ಬಣ್ಣದ ಬಳಿ ಮ್ಯಾಲೆ ಭಂಗಾರ ಬಣ್ಣದ ಚಿಕ್ಕಿ ಇರೋವು... ಹಿಂಗ ಭಾರಿ ಛಂದ ಛಂದದ ಬಳಿ



ಬೇಂದ್ರೆ ಅಜ್ಜನ ಮನೆ

ಫೋಟೊ: ಪ್ರಜಾವಾಣಿ ಸಂಗ್ರಹ